ದಿನಾಂಕ 13-02-2020 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

: ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

ನಾನು ಈ ದಾವೆಯನ್ನು ಹೊಲ ಮತ್ತು ರೈಸ ಮಿಲ್ ಸಲುವಾಗಿ ಸಲ್ಲಿಸಿದ್ದೇನೆ. ಅದರ ನಂಬರು ನನಗೆ ನೆನಪಿಲ್ಲಾ. ನಾನು ಈ ದಾವೆಯನ್ನು ಸರ್ವೆ ನಂ. 208 ಕ್ಷೇತ್ರ 05 ಎಕರೆ 01 ಗುಂಟೆ, ಸರ್ವೆನಂ.216/1 ಕ್ಷೇತ್ರ 03 ಎಕರೆ 24 ಗುಂಟೆ, ಸರ್ವೆ ನಂ.216/2 ಕ್ಷೇತ್ರ 03 ಎಕರೆ 21 ಗುಂಟೆ ಬಗ್ಗೆ ಸಲ್ಲಿಸಿದ್ದೇನೆ. ಸರ್ವೆ ನಂ. 201 ರಲ್ಲಿ ಸಹ ನಮಗೆ ಪಾಲು ಬೇಕು ಅಂತಾ ಈ ದಾವಾ ಸಲ್ಲಿಸಿದ್ದೇನೆ. ಸರ್ವೆ ನಂ.201 ನ್ನು ಈ ದಾವೆಯಲ್ಲಿ ಸೇರಿಸಿಲ್ಲಾ ಅಂದರೆ ಸರಿಯಲ್ಲಾ. ನಾನು ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಪಿತ್ರಾರ್ಜಿತ ಆಸ್ತಿಗಳು ಪ್ರಾಪ್ತವಾಗಿರುವುದಿಲ್ಲಾ. ರೈಸ್ ಮಿಲ್ಲನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ಸೇರಿಸಿರುವುದಿಲ್ಲಾ. ರೈಸ್ ಮಿಲ್ಲಿನ ನಂಬರು ನನಗೆ ನೆನಪಿಲ್ಲಾ. ನಾನು ಈ ಹಿಂದೆ ಮೂಲ ದಾವಾ ನಂ.19/2013 ನ್ನು ಸಲ್ಲಿಸಿದ್ದೇನೆ. ಆ ದಾವೆಯಲ್ಲಿಯೂ ಸಹ ಜಮೀನು ಮತ್ತು ರೈಸ ಮಿಲ್ ಸಲುವಾಗಿ ಸಲ್ಲಿಸಿದ್ದೆನು. ಬೇರೆ ಆಸ್ತಿಗಳು ಇರುವುದಿಲ್ಲಾ. ಆ ದಾವೆಯಲ್ಲಿ ಆಸ್ತಿ ನಂ.391 ಎ ಮತ್ತು 391 ಬಿ ಆಸ್ತಿಗಳನ್ನು ಸೇರಿಸಿದ್ದೇನೆ ಅಂದರೆ ನನಗೆ ನೆನಪಿಲ್ಲಾ. ಹಿಂದಿನ ದಾವೆಯಲ್ಲಿ ಸರ್ವೆ ನಂ.201/6 ನ್ನು ಸೇರಿಸಿದ್ದೇನೆ ಅಂದರೆ ನನಗೆ ನೆನಪಿಲ್ಲಾ, ಈ ದಾವೆಯಲ್ಲಿ ಸೇರಿಸಿದ್ದೇನೆ. ನಮ್ಮ ತಂದೆಯ ಜೀವಿತ ಕಾಲದಲ್ಲಿ ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರಲಿಲ್ಲಾ.

ನಾನು 1960 ರಲ್ಲಿ ಜನಿಸಿದ್ದೇನೆ. ನಾನು 1980 ರಲ್ಲಿ ಮದುವೆಯಾಗಿದ್ದೇನೆ. ನಮ್ಮ ತಂದೆಯ ಜೀವಿತ ಕಾಲದಲ್ಲಿ 1993 ರಲ್ಲಿ ಆಸ್ತಿಗಳ ಹಂಚಿಕೆ ಮಾಡಿದ್ದಾರೆ ಅಂದರೆ ಸರಿಯಲ್ಲಾ. ನಮ್ಮ ತಂದೆ ವಿಭಾಗ ಮಾಡಿಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಮೃತಪಟ್ಟ ನಂತರ ಅವರಿಗೆ ಬಂದ ಜಮೀನು ನನಗೆ ಕೊಡಬೇಕು ಅಂತಾ ಬರೆದಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ.

ನಮ್ಮ ತಂದೆ ವಿಭಾಗ ಮಾಡುವಾಗ ನನ್ನನ್ನು ಕರೆದಿರುವುದಿಲ್ಲಾ, ಆದ್ದರಿಂದ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಮಾಡಿದ ವಾಟ್ನಿ ವರದಿಗೆ ನನ್ನ ಒಪ್ಪಿಗೆ ಇರುವುದಿಲ್ಲಾ. 1993 ರಿಂದ ಗ್ರಾಮ ದಾಖಲೆಗಳಲ್ಲಿ ಅವರಿಗೆ ಬಂದ ಆಸ್ತಿಗಳಿಗೆ ಅವರವರ ಹೆಸರು ನಮೂದಾಗಿದೆ ಅಂದರೆ ನಿಜ. ಆ ಪ್ರಕಾರ ಅವರವರು ವಹಿವಾಟು ಮಾಡುತ್ತಾ ಬಂದಿದ್ದಾರೆ ಅಂದರೆ ಸರಿಯಲ್ಲ. ನಮ್ಮ ಸಹೋದರರರು ಅವರಿಗೆ ಬಂದ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಡ. ನಂ.2285 ನ್ನು ನಾನು ಯಾವುದೇ ಸಕ್ಷಮ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲಾ. ಸರ್ವೆ ನಂ.175/2 ನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲಾ ಅಂದರೆ ನಿಜ. ಸರ್ವೆ ನಂ.159/1 ಕ್ಷೇತ್ರ 31 ಗುಂಟೆ ಜಮೀನನ್ನು ಜಯಲಿಂಗಪ್ಪ ಎನ್ನುವವರ ಹಿಸ್ಸೆಗೆ ಕೊಟ್ಟಿದ್ದು ಅವರು ಅದನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲಾ. 1960 ರಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರರರು ಸೇರಿ ಜಾಗೆಯನ್ನು ಖರೀದಿಸಿದ್ದರು. ಸದರಿ ಜಾಗೆಯು ಪಂಚಾಯತಿ ಹದ್ದಿಗೆ ಒಳಪಟ್ಟಿದೆಯೋ ಅಥವಾ ಕಂದಾಯ ಇಲಾಖೆಗೆ ಒಳಪಟ್ಟಿದೆಯೋ ನನಗೆ ಗೊತ್ತಿಲ್ಲಾ. ನಾಲಿಗಿ ಪವಾಡಿಮಠ ಎನ್ನುವವರಿಂದ ಜಾಗೆಯನ್ನು ಖರೀದಿಸಿದ್ದಾರೆ. ಅದರ ಒಟ್ಟು ಕ್ಷೇತ್ರ 01 ಎಕರೆ. ಹಿಂದಿನ ದಾವೆಯಲ್ಲಿ 01 ಎಕರೆ 09 ಗುಂಟೆ ಅಂತಾ ಬರೆಸಿದ್ದೇನೆ ಅಂದರೆ ಸರಿಯಲ್ಲಾ. ನಾನು ಹಿಂದಿನ ದಾವಾ ಸಲ್ಲಿಸುವಾಗ ರೈಸ ಮಿಲ್ಲಿನ ಮಾರುಕಟ್ಟೆ ಬೆಲೆ ರೂ.80,00,000/- ಹೆಚ್ಚು ಇತ್ತು ಅಂದರೆ ಸರಿಯಲ್ಲಾ. ಆ ದಾವೆಯಲ್ಲಿ ನಾನು ಸಹಿ ಮಾಡಿದ್ದೆನು. ಆದರೆ ಅದನ್ನು ನನ್ನ ಅಣ್ಣ ಚಂದ್ರಶೇಖರಪ್ಪ ಎನ್ನುವವರು ನೋಡಿಕೊಳ್ಳುತ್ತಿದ್ದರು. ರೈಸ ಮಿಲ್ಲನ್ನು ನಮ್ಮ ತಂದೆ ಮತ್ತು ಆತನ ಸಹೋದರರರು ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ರೈಸ ಮಿಲ್ಲಿನ ಸಂಪೂರ್ಣ ಆಸ್ತಿಯನ್ನು 1993 ರಲ್ಲಿ ಖರೀದಿಸಿದ್ದಾರೆ. ನಾನು ಈ ದಾವೆಯಲ್ಲಿ 1991 ರಲ್ಲಿ ನಮ್ಮ ತಂದೆ ಆತನ ಸಹೋದರರಿಂದ ಅವರ ಭಾಗದ ರೈಸ ಮಿಲ್ಲನ್ನು ಖರೀದಿಸಿದ್ದಾರೆ ಎಂದು ಬರೆಸಿರುವುದು ನೆನಪಿರುವುದಿಲ್ಲಾ.

ರೈಸ ಮಿಲ್ಲನ್ನು ನಮ್ಮ ತಂದೆ ಮತ್ತು ಜಯಲಿಂಗಪ್ಪ ಎನ್ನುವವರು ಸೇರಿ ಖರೀದಿಸಿದ್ದರು. ನಮ್ಮ ತಂದೆ ಹಿಸ್ಸೆ ಮಾಡುವಾಗ ರೈಸ ಮಿಲ್ಲನ್ನು 6 ಮತ್ತು 7 ನೇ ಪ್ರತಿವಾದಿಯರಿಗೆ ಮಾತ್ರ ಕೊಟ್ಟಿದ್ದಾರೆ ಅಂದರೆ ಸರಿಯಲ್ಲಾ. 6 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ರೈಸ ಮಿಲ್ ಖಾತೆಯಾಗಿರುತ್ತದೆ ಅಂದರೆ ಸಾಕ್ಷಿಯು ಅವರು ಖೊಟ್ಟಿಯಾಗಿ ದಾಖಲು ಮಾಡಿಸಿಕೊಂಡಿದ್ದಾರೆ ಅನ್ನುತ್ತಾರೆ. ನಮ್ಮ ತಂದೆ ಭಾಗ ಮಾಡಿಕೊಟ್ಟ ಪ್ರಕಾರ ಕಾನೂನುಬದ್ಧವಾಗಿ ಅವರ ಹೆಸರಿಗೆ ಖಾತೆ ಆಗಿದೆ ಅಂದರೆ ಸರಿಯಲ್ಲಾ. ನಾನು 1993 ರಿಂದ 2013 ರ ವರೆಗೆ ದಾವಾ ಆಸ್ತಿಗಳ ದಾಖಲೆ ಗಳನ್ನು ನೋಡಿರುವುದಿಲ್ಲಾ. ನಮ್ಮ ತಂದೆ ಇದ್ದುದರಿಂದ ನಾವು ಗಮನ ಕೊಟ್ಟಿರುವುದಿಲ್ಲಾ. ರೈಸ ಮಿಲ್ಲನ್ನು ಕೆ ಎಸ್ ಎಫ್ ಸಿ ಗೆ ಅಡಮಾನ ಮಾಡಿರಬಹುದು, ಸಾಲ ಪಡೆದ ಬಗ್ಗೆ ನನಗೆ ಗೊತ್ತಿಲ್ಲಾ.

ನಮ್ಮ ತಂದೆ ಎಸ್ ಬಿ ಸತ್ಯಪ್ಪನವರ ಎಂದು ಕನ್ನಡದಲ್ಲಿ ಸಹಿ ಮಾಡುತ್ತಾರೆ. ಪ್ರತಿವಾದಿಯರು ತಮ್ಮ ಅನುಕೂಲಕ್ಕೆ ಸಾಲ ಪಡೆದಿರಬಹುದು. ಅವರು ವ್ಯವಹಾರವನ್ನು ಅಭಿವೃದ್ಧಿ ಪಡಿಸಿರುವುದಿಲ್ಲಾ. ರೈಸ ಮಿಲ್ಲನ್ನು ಅಭಿವೃದ್ಧಿ ಪಡಿಸಲು ನಮ್ಮ ತಂದೆ ಮತ್ತು ಸಹೋದರರು ಕೆ ಎಸ್ ಎಫ್ ಸಿ ಯಿಂದ ಸಾಲ ಪಡೆದಿದ್ದಾರೆ ಅಂದರೆ ಸರಿಯಲ್ಲಾ. ನಮ್ಮ ತಂದೆ ಇದ್ದುದರಿಂದ ನಾನು ರೈಸ ಮಿಲ್ ಮೇಲಿನ ಸಾಲದ ಬಗ್ಗೆ ವಿಚಾರ ಮಾಡಲಿಲ್ಲ. ನಮ್ಮ ತಂದೆಗೆ ದಾವಾ ಆಸ್ತಿಗಳಲ್ಲಿ ಭಾಗ ಕೊಡುವಂತೆ ಕೇಳಿದಾಗ ಅವರು ಕೊಡದೇ ಇರುವುದರಿಂದ ದಾವಾ ಸಲ್ಲಿಸಿದ್ದೇನೆ. ನಮ್ಮ ತಂದೆ ವಕೀಲರ ಮೂಲಕ ನೋಟೀಸ್ ಕೊಟ್ಟಿದ್ದೇನೆ. ಸದರಿ ನೋಟೀಸಿನ ಪ್ರತಿಯನ್ನು ಹಾಜರು ಮಾಡಿರುವುದಿಲ್ಲಾ. ದಾವಾ ಸಲ್ಲಿಸುವ ಕಾಲಕ್ಕೆ ನಾನು ರೈಸ ಮಿಲ್ ಹತ್ತಿರ ಹೋಗಿರುವುದಿಲ್ಲಾ. ನಾನು ದಾವಾ ಸಲ್ಲಿಸುವ ಕಾಲಕ್ಕೆ ಪೆಟ್ರೋಲ್ಬಂಕ್ ಮತ್ತು ವೇ–ಬ್ರಿಡ್ಜ್ ತಯಾರಿಕೆ ಘಟಕ ಇರಲಿಲ್ಲಾ. ನಾನು ದಾವಾ ಸಲ್ಲಿಸುವ ಕಾಲಕ್ಕೆ ಬೆಳಗಾಲಪೇಟೆ ಗ್ರಾಮಕ್ಕೆ ಹೋಗಿರುವುದಿಲ್ಲಾ. ನಮ್ಮ ತಂದೆ ಮತ್ತು ಸಹೋದರರು

ಕೆ ಎಸ್ ಎಫ್ ಸಿ ಯಿಂದ ಸಾಲ ಪಡೆದು ಮರುಪಾವತಿ ಮಾಡಿರುವುದಿಲ್ಲಾ ಅಂದರೆ ನನಗೆ ಗೊತ್ತಿಲ್ಲಾ. ನಾನು ಕೆ ಎಸ್ ಎಫ್ ಸಿ ಗೆ ಹೋಗಿ ಸಾಲ ಮರುಪಾವತಿ ಮಾಡಿದ ಬಗ್ಗೆ ವಿಚಾರ ಮಾಡಿ ತಿಳಿದುಕೊಂಡಿರುವುದಿಲ್ಲಾ. ಕೆ ಎಸ್ ಎಫ್ ಸಿ ಪಡೆದ ಸಾಲದ ಹಣದ ದುಪ್ಪಟ್ಟು ಬಡ್ಡಿಯ ಮೊತ್ತ ಆಗಿತ್ತು ಅಂದರೆ ನನಗೆ ಗೊತ್ತಿಲ್ಲಾ. ರೈಸ ಮಿಲ್ ಮೇಲೆ ರೂ.13,00,000/- ಕ್ಕೂ ಮೇಲ್ಪಟ್ಟು ಸಾಲ ಬಾಕಿ ಇತ್ತು ಅಂದರೆ ನನಗೆ ಗೊತ್ತಿಲ್ಲಾ. ಆ ಬಗ್ಗೆ ಕೆ ಎಸ್ ಎಫ್ ಸಿ ಯವರು ನಮ್ಮ ತಂದೆ ಮತ್ತು ಸಹೋದರರಿಗೆ ನೋಟೀಸು ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಮತ್ತು ಸಹೋದರರಿಗೆ ಬಹಳಷ್ಟು ಹಣಕಾಸಿನ ಮುಗ್ಗಟ್ಟು ಆಗಿದ್ದರಿದ ಕೆ ಎಸ್ ಎಫ್ ಸಿ ಪಡೆದ ಸಾಲದ ಹಣವನ್ನು ಮರುಪಾವತಿ ಮಾಡಿಲ್ಲಾ ಅಂದರೆ ನನಗೆ ಗೊತ್ತಿಲ್ಲಾ. ಕೆ ಎಸ್ ಎಫ್ ಸಿ ಯವರು ಸಾಲದ ಹಣ ಮರುಪಾವತಿ ಮಾಡದೇ ಇರುವುದರಿಂದ ರೈಸ ಮಿಲ್ಲನ್ನು ಹರಾಜಿಗೆ ಹಾಕುವ ಪ್ರಸಂಗ ಉಂಟಾಯಿತು ಅಂದರೆ ಸರಿಯಲ್ಲಾ. ಆದ್ದರಿಂದ 8 ರಿಂದ 12 ನೇ ಪ್ರತಿವಾದಿ ಯರಿಗೆ ಮಾರಾಟ ಮಾಡಲು ಕೆ ಎಸ್ ಎಫ್ ಸಿ ಯವರ ಒಪ್ಪಿಗೆಯ ಆಧಾರದ ಮೇಲಿಂದ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲಾ. ಕ್ರಯದ ಮೊತ್ತವನ್ನು ಕೆ ಎಸ ಎಫ್ ಸಿ ಯವರಿಗೆ ಮರುಪಾವತಿ ಮಾಡಿದ್ದಾರೆ ಅಂದರೆ ಸರಿಯಲ್ಲಾ. ರೈಸ ಮಿಲ್ಲನ್ನು ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲಾ. ನ್ಯಾಯಾಲಯದ ಮುಂದೆ ಹಾಜರು ಮಾಡಿದ 8 ರಿಂದ 12 ನೇ ಪ್ರತಿವಾದಿ ಯರಿಗೆ ಮಾರಾಟ ಮಾಡಿದ ರೈಸ ಮಿಲ್ಲಿನ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲಾ 8 ರಿಂದ 12 ನೇ ಪ್ರತಿವಾದಿಯರಿಗೆ ನಮ್ಮ ತಂದೆ ಮತ್ತು ನನ್ನ ಸಹೋದರರಾದ 6 ಮತ್ತು 7 ನೇ ಪ್ರತಿವಾದಿಯರು ಸೇರಿ ದಿನಾಂಕಃ 05-11-1998 ರಂದು ಮಾರಾಟ ಮಾಡಿದ್ದಾರೆ ಅಂದರೆ ನನಗೆ ತಿಳಿಸಿರುವುದಿಲ್ಲಾ. 1998 ರಲ್ಲಿ ನನಗೆ ಆಸ್ತಿಯಲ್ಲಿ ಹಕ್ಕು ಇತ್ತು. ರೈಸ ಮಿಲ್ ಇರುವ ಜಾಗೆಯಲ್ಲಿ ತುಳಸಿ ಪೆಟ್ರೋಲ್ ಬಂಕ್ ಇರಬಹುದು. ರೈಸ ಮಿಲ್ ಇರುವ ಜಾಗೆಯಲ್ಲಿ 8 ರಿಂದ

12 ನೇ ಪ್ರತಿವಾದಿಯರು ಹಾಕಿದ ಪೆಟ್ರೊಲ್ ಬಂಕ್ ನಿಂದ ತುಳಸಿ ಪೆಟ್ರೋಲ್ ಬಂಕಿನ ಮಾಲಕರಿಗೆ ಆರ್ಥಿಕವಾಗಿ ಹಿನ್ನಡೆಯಾಗಿದೆ ಅಂದರೆ ನನಗೆ ಗೊತ್ತಿಲ್ಲಾ. ತುಳಸಿ ಪೆಟ್ರೋಲ್ ಬಂಕಿನ ಮಾಲಕರ ಚಿತಾವಣೆಯ ಮೇರೆಗೆ ನಾನು ಸುಳ್ಳು ದಾವಾ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ತುಳಸಿ ಪೆಟ್ರೋಲ್ ಬಂಕಿನ ಮಾಲಕರ ಚಿತಾವಣೆಯ ಮೇರೆಗೆ ಗ್ರಾಮಸ್ಥರು ಬೇರೆ ಬೇರೆ ದಾವೆಗಳನ್ನು ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. 8 ರಿಂದ 12 ನೇ ಪ್ರತಿವಾದಿಯರಿಗೆ ಕೊಟ್ಟ ಎನ್‌ಓ ಸಿ ಯ ಮೇಲೆ ತುಳಸಿ ಪೆಟ್ರೋಲ್ ಬಂಕಿನ ಮಾಲಕ ಹೈ ಕೋರ್ಟಿಗೆ ಮೇಲ್ಮನವಿ ಮಾಡಿಕೂಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಅವುಗಳು ವಜಾಗೊಂಡಿವೆ ಅಂದರೆ ನನಗೆ ಗೊತ್ತಿಲ್ಲಾ. ಎಲ್ಲ ಸಂಗತಿಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ರೈಸ ಮಿಲ್ಲಿನ ಮೇಲೆ ನಮ್ಮ ತಂದೆ ಮತ್ತು ಸಹೋದರರು ಮಾಡಿದಎಲ್ಲ ವ್ಯವಹಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. 1993 ರಲ್ಲಿ ನಮ್ಮ ತಂದೆ ನಮ್ಮ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಮಾಡಿದ್ದರೂ ಸಹ ನಾನು ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. 8 ರಿಂದ 12 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಮ್ಮ ತಂದೆ ಆಸ್ತಿ ಕೊಡದಿರುವುದೇ ಮೋಸ ಆಗಿದೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ನನಗೆ ಹಿಸ್ಸೆ ಇಲ್ಲಾ ಅಂದರೆ ಸರಿಯಲ್ಲಾ.

: **ಮರುವಿಚಾರಣೆ** : **ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ